**ಅಸಲು ದಾವಾ ನಂಃ148/2011**
**ಪಿ.ಡಬ್ಲ್ಯೂಃ2,**

**<u>ದಿನಾಂಕ :07-03-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟಿ ಸವಾಲು :- ಶ್ರೀ. ಬಿ.ಸಿ.ವಿ. ಪ್ರತಿವಾದಿ ನಂ-12 ಪರ ವಕೀಲರಿಂದ :</u>**

ಸುಗಣ್ಣಗೌಡ ನನ್ನ ತಾಯಿಯ ತಂದೆ.ಸುಗಣ್ಣಗೌಡ ರವರಿಗೆ 4 ಗಂಡು, 2 ಹೆಣ್ಣು ಮಕ್ಕಳು, ಅವರ ಹೆಸರು ಈ ಕೇಸಿನ ಮೃತ ವಾದಿ ಹಂಪಮ್ಮ, 4ನೇ ಪ್ರತಿವಾದಿ, ಸಾಹೇಬಗೌಡ ಮತ್ತು 1ನೇ ಪ್ರತಿವಾದಿ ಮತ್ತು 2ನೇ ಪ್ರತಿವಾದಿ ಮತ್ತು 3ನೇ ಪ್ರತಿವಾದಿ. ಸಾಹೇಬಗೌಡ ಇವರು ನನಗೆ ತಾಯಿಯ ತಮ್ಮ. ಸಾಹೇಬಗೌಡ ಇವರು ಜೀವಿತ ಅವಧಿಯಲ್ಲಿ ಮದುವೆ ಆಗಿದ್ದರು. ಸಾಹೇಬಗೌಡನ ಹೆಂಡತಿ ಹೆಸರು ಶಂಕ್ರಮ್ಮ. ಸಾಹೇಬಗೌಡನ ಮಕ್ಕಳ ಹೆಸರು ವಿಶ್ವನಾಥ ರೆಡ್ಡಿ, ಅವರು ಮರಣ ಹೊಂದಿದ್ದಾರೆ. ವಿಶ್ವನಾಥ ರೆಡ್ಡಿ ಇವರು ಮದುವೆ ಆಗಿದ್ದಾರೆ, ಅವರ ಹೆಂಡತಿ 11ನೇ ಪ್ರತಿವಾದಿ, ಅವರಿಗೆ 12 ಮತ್ತು 13 ಪ್ರತಿವಾದಿ ಮಕ್ಕಳು. ಸಾಹೇಬಗೌಡ ಅವರು ತಮ್ಮ ತಂದೆ ಜೀವಿತ ಅವಧಿಯಲ್ಲಿ ಪಾಲು ಕೇಳಿದರು ಆದರೆ ಅವರ ತಂದೆ ಪಾಲು ಮಾಡದೆ, 46 ಎಕರೆ ಜಮೀನು ಕೊಟ್ಟು ಮನೆಯಿಂದ ಹೊರಗಡೆ ಹಾಕಿರುತ್ತಾರೆ. ಸುಗಣ್ಣಗೌಡ ಇವರ ಹೆಸರಿನಲ್ಲಿ 180 ಎಕರೆ ಜಮೀನು ಇತ್ತು. ಅವರ ತಾಯಿ ಶಿವಬಸಮ್ಮ ಇವರಿಗೆ 70 ಎಕರೆ ಜಮೀನು ಇತ್ತು, ಸುಗಣ್ಣಗೌಡಾ ಇವರ ಹೆಂಡತಿ ಸುಗಮ್ಮ ಇವರು ಅವರ ಗಂಡನಿಂದ ಬೇರೆ ಆಗಿ ಅವರ ಹೆಸರಿನಲ್ಲಿ 70 ಎಕರೆ ಜಮೀನು ಇತ್ತು. ಶಿವಬಸಮ್ಮ ಇವರು ತೀರಿ ಹೋದ ನಂತರ ಅವರ ಆಸ್ತಿಯಲ್ಲಿ ಯಾವುದೇ ಪಾಲು ಆಗಿಲ್ಲಾ. ಸುಗಮ್ಮ ಇವರ ಆಸ್ತಿಯಲ್ಲಿ ಯಾವುದೇ ಭಾಗ ಆಗಿಲ್ಲಾ ಆದರೆ ಅವರು ಮೃತ ವಾದಿಗೆ ಸ.ನ.164 ರಲ್ಲಿ 23 ಎಕರೆ 10 ಗುಂಟೆ ದಾನವಾಗಿ ಕೊಟ್ಟಿದ್ದರು. ಸುಗಮ್ಮ ಇವರು ಮೃತ ವಾದಿಗೆ ದಾನವಾಗಿ

**ಅಸಲು ದಾವಾ ನಂಃ148/2011**
**ಪಿ.ಡಬ್ಲ್ಯೂಃ2,**

ಕೊಟ್ಟ ಉಳಿದ ಜಮೀನಿನಲ್ಲಿ ಈ ಪ್ರತಿವಾದಿಯರಿಗೆ ಪಾಲು ಇದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಮೃತ ವಾದಿಗೆ ಮತ್ತು ಪ್ರತಿವಾದಿ ನಂ-1 ರಿಂದ 10 ರವರಿಗೆ ಭಾಗ ಇದೆ ಎಂದು ನುಡಿಯುತ್ತಾರೆ. ಅದೇ ರೀತಿ ಶಿವಬಸಮ್ಮ ಇವರ ಆಸ್ತಿಯಲ್ಲಿ ಈ ಪ್ರತಿವಾದಿಯರಿಗೆ ಮತ್ತು ಮೃತ ವಾದಿಗೆ ಮತ್ತು ಪ್ರತಿವಾದಿ ನಂ-1 ರಿಂದ 10 ರವರಿಗೆ ಭಾಗ ಇದೆ ಎಂದರೆ ಸರಿ. ಶಿವಬಸಮ್ಮ ಇವರ ಆಸ್ತಿ ಸ.ನ. 2, 5, 29, 159, 162 ಇವೆಲ್ಲಾ ಬಳ್ಳೊಳ್ಳಗಿಯಲ್ಲಿ ಒಟ್ಟು 70 ಎಕರೆ ಜಮೀನು ಇವೆ. ಅದೇ ರೀತಿ ಸುಗಮ್ಮ ಇವರಿಗೆ ಆಸ್ತಿ ಸ.ನ. 162,164 ಇನ್ನು 3 ಸರ್ವೆ ನಂಬರಗಳು ಇವೆ ನನಗೆ ಈಗ ನನೆಪಿಲ್ಲಾ ಇವೆಲ್ಲಾ ನಾಲವಾರದಲ್ಲಿ 70 ಎಕರೆ ಜಮೀನು ಇದೆ ಎಂದು ನುಡಿಯುತ್ತಾರೆ.

**ಪಾಟಿ ಸವಾಲು : ಉಳಿದ ಪ್ರತಿವಾದಿಯರು ಕಾಲವಕಾಶ ಕೋರಿದ್ದರಿಂದ, ಪಾಟಿ ಸವಾಲು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸರಿ.ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಚಿತ್ತಾಪೂರ.**